
# ಬೆಳಕಿನ ಸಂಚಲನ

ಸಂಪುಟ 5, ಸಂಚಿಕೆ 3 ದ್ವೈಮಾಸಿಕ ವಾರ್ತಾಪತ್ರ ಮೇ-ಜೂನ್ 2017



**ಗುರೂಜಿ ಕೃಷ್ಣಾನಂದ** (1939-2012)

## ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

## ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

## ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

## ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

## ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ ಭಾಷಣದ ಆಯ್ದ ಭಾಗಗಳು)

**ಅನು: ಶ್ರೀದೇವಿ**

ಎಲ್ಲಾ ಮಾನವರೂ ಮೌಲ್ಯಾಧಾರಿತ ವ್ಯವಸ್ಥೆಯನ್ನು ಪಾಲಿಸಲೇಬೇಕು. ಅದು ವಿಶ್ವವ್ಯಾಪಿ ಮೌಲ್ಯಗಳ ವ್ಯವಸ್ಥೆ ಅಥವಾ ಏಕತ್ವತಾವಾದವಾಗಿರಬೇಕು (Universalism). ವಿಶ್ವವ್ಯಾಪಿ ಮೌಲ್ಯಗಳಾದ ಎಲ್ಲರನ್ನೂ ಪ್ರೀತಿಯಿಂದ ಕಾಣುವುದು, ಕರುಣೆ, ಹಂಚಿಕೊಳ್ಳುವುದು, ಸತ್ಯ, ಶಾಂತಿ ಹಾಗೂ ಪರಿಪೂರ್ಣತೆಗಳು ಎಲ್ಲಾ ಧರ್ಮಗಳ ಸಾರಾಂಶಗಳಾಗಿವೆ. ಧ್ಯಾನವಾಗಿರಲಿ ಅಥವಾ ಯಾವುದೇ ದೊಡ್ಡ ಅಥವಾ ಚಿಕ್ಕ ಕೆಲಸವಾಗಿರಲಿ, ನಾವು ಮಾಡುವ ಎಲ್ಲಾ ಕೆಲಸವನ್ನೂ ಪರಿಪೂರ್ಣವಾಗಿ ಮಾಡಲು ಪ್ರಯತ್ನಿಸಬೇಕು.

ಅಂತಹ ಮೌಲ್ಯಗಳ ವ್ಯವಸ್ಥೆಯು ನಮ್ಮ ಭವಿಷ್ಯದ ಜೀವನ ಶೈಲಿಯಾಗಿರುತ್ತದೆ; ಅದು ಧರ್ಮಾತೀತ ಹಾಗೂ ಪ್ರಬುದ್ಧ ರೀತಿಯ ಜೀವನವಾಗಿರುತ್ತದೆ. ಇಡೀ ಮನುಕುಲವೇ ಅದನ್ನು ಪಾಲಿಸುತ್ತದೆ. ನಂಬಿಕೆಗಳ ಆಧಾರದ ಮೇಲೆ ಇರುವ ಸಧ್ಯದ ಎಲ್ಲಾ ವ್ಯವಸ್ಥೆಗಳನ್ನು ನೇರ ಅನುಭವ ಹಾಗೂ ಈ ಮೌಲ್ಯಗಳನ್ನು ಅಭಿವ್ಯಕ್ತಿಗೊಳಿಸುವ ವ್ಯವಸ್ಥೆಯು ಬದಲಾಯಿಸುತ್ತದೆ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಶಾಲಾ ಮಕ್ಕಳಿಗೆ ಲೈಟ್ ಚಾನಲಿಂಗ್ ಹೇಳಿಕೊಡುವುದರ ಬಗ್ಗೆ ಗಮನ ಹರಿಸುತ್ತಿರುವುದೇ ಅಲ್ಲದೆ, ಈ ಸದ್ದಿಲ್ಲದ ಆದರೆ ಮಹಾನ್ ಸಂಚಲನದ ಬಗ್ಗೆ ತಿಳುವಳಿಕೆಯನ್ನು ಸಾಮಾಜಿಕ ಮಾಧ್ಯಮಗಳ ಮೂಲಕ ನಾವು ಹರಡುತ್ತಿದ್ದೇವೆ. ಪ್ರಪಂಚದ ವಿವಿಧ ಭಾಗಗಳ ಜನರ ಸಹಾಯದಿಂದ, ಈ ತಿಳುವಳಿಕೆಯು ಹರಡುತ್ತಾ ವಿಶ್ವದ ಎಲ್ಲಾ ಮೂಲೆಗಳಿಗೆ ತಲುಪುತ್ತಿದೆ. ಆದರೆ, ಈ ಪ್ರಪಂಚದ ವಿಧಿಯನ್ನು ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿರುವಂತಹ, ಈ ಶಕ್ತಿಯುತವಾದ ಸಂಚಲನದ ಬಗ್ಗೆ ಇನ್ನೂ ಬಹುತೇಕ ಜನರಿಗೆ ತಿಳಿದಿಲ್ಲ.

ಈ ಪ್ರಪಂಚದ ವಿಧಿಯು ನಿಧಾನವಾಗಿ ಬದಲಾಗುತ್ತಿರಬಹುದು. ಆದರೆ, ಪ್ರಪಂಚದಲ್ಲಿನ ಬಹುಪಾಲು ಜನರಿಗೆ ಇದರ ಅರಿವುಂಟಾಗಿ ಅವರು ಈ ಸಂಚಲನದಲ್ಲಿ ಭಾಗವಹಿಸಿದರೆ ಬಹು ಶೀಘ್ರವಾಗಿ ಹೆಚ್ಚಿನ ಬದಲಾವಣೆಗಳಾಗಬಹುದು. ಅವರು ಯಾವುದೇ ಪ್ರತಿಭಟನೆಗಳನ್ನು ಘೋಷಿಸುವ, ಪ್ರತಿಭಟನೆಗಳಲ್ಲಿ ಸದಸ್ಯತ್ವವನ್ನು ಪಡೆಯುವ ಅಥವಾ ಭಾಗವಹಿಸುವ ಅವಶ್ಯಕತೆಯಿಲ್ಲ. ಅವರು ತಮ್ಮ ತಮ್ಮ ಮನೆಯ ಏಕಾಂತ ಸ್ಥಳದಿಂದ ಸದ್ದಿಲ್ಲದೆ ಬೆಳಕನ್ನು ಚಾನಲ್ ಮಾಡಿದರೆ ಸಾಕು.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

2009ರಲ್ಲಿ ನಾವು ಲೈಟ್ ಚಾನಲ್ ಮಾಡುವುದನ್ನು ಹೇಳಿಕೊಡುವುದಕ್ಕೆ ಪ್ರಾರಂಭಿಸಿದಾಗ ನಮ್ಮ ಗಮನವೆಲ್ಲಾ ಶಾಲಾ ಮಕ್ಕಳ ಕಡೆಗಿತ್ತು. ಕಾರ್ಯಕರ್ತರ ಕೊರತೆಯಿಂದಾಗಿ, ಮಕ್ಕಳ ಸಂಖ್ಯೆಗೆ ಹೋಲಿಸಿದರೆ ಹೆಚ್ಚು ವಯಸ್ಕರನ್ನು ತಲುಪಲು ಸಾಧ್ಯವಾಗಲಿಲ್ಲ. ಎಂಟು ವರ್ಷಗಳ ನಂತರ, ಹಿಂದೆ ಲೈಟ್ ಚಾನಲಿಂಗ್ ಅನ್ನು ಕಲಿತ ಮಕ್ಕಳು ಈಗ ಕಾಲೇಜುಗಳಲ್ಲಿದ್ದಾರೆ, ಉನ್ನತ ವ್ಯಾಸಂಗ ಮಾಡುತ್ತಿದ್ದಾರೆ ಹಾಗೂ ಅನೇಕರು ಕೆಲಸ ಮಾಡುತ್ತಿದ್ದಾರೆ ಎನ್ನುವುದು ಈಗ ನಮಗೆ ಅರಿವಾಗಿದೆ. ಅನೇಕರು ಈಗಲೂ ಲೈಟ್ ಚಾನಲ್ ಮಾಡುತ್ತಿದ್ದಾರೆ. ಈ ಅದ್ಭುತವಾದ ಆತ್ಮಗಳ ಮೂಲಕ ಬೆಳಕಿನ ಬಗೆಗಿನ ತಿಳುವಳಿಕೆಯು ಪ್ರಪಂಚದ ವಿವಿಧ ಭಾಗಗಳಿಗೆ ತಲುಪುತ್ತಿರುವ ವಿಷಯ ತೃಪ್ತಿಯನ್ನು ನೀಡಿದೆ.

ಪರೀಕ್ಷೆಗಳಿಗೆ ಮುಂಚೆ ಅನೇಕ ಶಾಲೆಗಳು ಲೈಟ್ ಚಾನಲ್ ಮಾಡಿರುವುದನ್ನು ತಿಳಿದು ಸಂತಸವಾಗಿದೆ. ಇದು ಲೈಟ್ ಚಾನಲಿಂಗ್ ಬಗ್ಗೆ ಅವರಿಗಿರುವ ವಿಶ್ವಾಸವನ್ನು ತೋರಿಸುತ್ತದೆ.

ಅಗಾಧವಾದ ಬೆಂಬಲ ನೀಡಿದ ಶಾಲಾ ಮಕ್ಕಳು ಮತ್ತು ಅಧಿಕಾರಿಗಳಿಗೆ ನಮ್ಮ ಹೃತ್ಪೂರ್ವಕವಾದ ಕೃತಜ್ಞತೆಗಳು.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರಸ್ತೆ), ಬೆಂಗಳೂರು-560077, ಭಾರತ.
ಫೋನ್: (080) 2846 5280, 99000 75280 (10am to 5pm), ಇ-ಮೇಲ್: info@lightagemasters.com
website : www.lightagemasters.com, www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಾಗಿಲ್ಲ.

### ಬೆಂಗಳೂರು

**ಸೋಮವಾರದಿಂದ ಶುಕ್ರವಾರದವರೆಗೆ (ಸಂಜೆ 7 - 7.15)**
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ
ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

**ಸೋಮವಾರ (ಸಂಜೆ 6.30 - 7)**
ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಬುಧವಾರ (ಸಂಜೆ 6.30 - 7)**
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಶುಕ್ರವಾರ (ಸಂಜೆ 6.30 - 7)**
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ, ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ ಭೋಸೆಕರ್

**ಶನಿವಾರ (ಸಂಜೆ 6.30 - 7)**
ಬಲಮುರಿ ಮಹಾಗಣಪತಿ, ಶ್ರೀ ರಾಜರಾಜೇಶ್ವರಿ ಮತ್ತು ಶ್ರೀ ಲಕ್ಷ್ಮೀ ನಾರಾಯಣ ದೇವಸ್ಥಾನ,

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ–ಮೇಲ್ info@lightagemasters.com ಗೆ ಬರೆಯಿರಿ.



ಬೆಂಗಳೂರಿನ ಕೆಂಗೇರಿಯಲ್ಲಿರುವ ಲೈಟ್ ಚಾನಲಿಂಗ್ ಕೇಂದ್ರದಲ್ಲಿನ ಸದಸ್ಯರು ಲೈಟ್ ಚಾನಲ್ ಮಾಡುತ್ತಿರುವುದು

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ಪರಿವರ್ತನೆಗೆ ವರ್ಷಾನುಗಟ್ಟಳೆಯ ಧ್ಯಾನದ ಅವಶ್ಯಕತೆಯಿಲ್ಲ. ಪರಿವರ್ತನೆಯು ಕ್ಷಣಾರ್ಧದಲ್ಲಿ ಉಂಟಾಗುತ್ತದೆ.
- ಆತ್ಮದ ಮಟ್ಟದಲ್ಲಿ ನೀವು ಬೆಳಕನ್ನು ಅಂಗೀಕರಿಸಿದ ತಕ್ಷಣ ನೀವು ಪರಿವರ್ತನೆಗೊಂಡ ವ್ಯಕ್ತಿಯಾಗುವಿರಿ.
- ಇತರರನ್ನು ಆಕ್ಷೇಪಿಸಲು ಹಾಗೂ ತಿದ್ದಲು ಯಾವುದೇ ಹಕ್ಕು ನಮಗಿಲ್ಲ. ಪ್ರತಿಯೊಂದು ಆತ್ಮವನ್ನು ದೇವರು ನೋಡಿಕೊಳ್ಳುತ್ತಾನೆ.
- ಯಾರಿಂದಲಾದರೂ ಅಶಾಂತಿ ಹೊರಹೊಮ್ಮುತ್ತಿರುವುದನ್ನು ನಾವು ಗಮನಿಸಿದಾಗ, ನಮ್ಮ ಸಕಾರಾತ್ಮಕ ಕಂಪನಗಳನ್ನು ಮತ್ತು ಪ್ರೀತಿಯನ್ನು ಅವರಿಗೆ ಕಳುಹಿಸೋಣ.
- ಪ್ರೀತಿಯನ್ನು ಹರಡಿದಾಗ ಮತ್ತು ಸಂತೋಷವನ್ನು ಹಂಚಿಕೊಂಡಾಗ, ಅವುಗಳನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಹಿಂದಿರುಗಿ ಪಡೆಯುತ್ತೇವೆ.
- ಪ್ರಕೃತಿ, ಇತರರು ಹಾಗೂ ದೇವರ ಬಗ್ಗೆ ನಮಗೆ ಪ್ರೀತಿ ಇಲ್ಲದಿರುವುದೇ ನಮ್ಮಲ್ಲಿನ ಅಸಾಮರಸ್ಯಕ್ಕೆ ಪ್ರಮುಖ ಕಾರಣ.
- ಆಧ್ಯಾತ್ಮಿಕತೆಯೆಂದರೆ ಇತರರನ್ನು ಪ್ರೀತಿಸುವ ಸಾಮರ್ಥ್ಯ, ದೇವರು ನಮ್ಮ ಮೂಲಕ ಅಭಿವ್ಯಕ್ತಿಗೊಳ್ಳಲು ಅವಕಾಶ ಮಾಡಿಕೊಡುವ ಸಾಮರ್ಥ್ಯ ಹಾಗೂ ನಮ್ಮ ಅಹಂ ಅನ್ನು ದಮನಮಾಡುವ ಸಾಮರ್ಥ್ಯ.
- ನಮ್ಮಲ್ಲಿ ಪ್ರೀತಿಯಿದ್ದಾಗ ಇತರರನ್ನು ಗೌರವಿಸುತ್ತೇವೆ, ಜೀವನವನ್ನು ಗೌರವಿಸುತ್ತೇವೆ, ಪ್ರತಿಯೊಂದನ್ನೂ ಗೌರವಿಸುತ್ತೇವೆ.

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 5133 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 27.78 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | : | 1240 |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ಪ್ರೀತಿ ಸೇರಿಸಿ

ಕಾರ್ತೀಕ್ ಎನ್; ಅನು: ಶ್ರೀದೇವಿ

"ಈ ಸೆಷನ್‌ಗಳಲ್ಲಿ ಭಾಗವಹಿಸಿದಾಗ ಚೆನ್ನಾಗಿರುತ್ತದೆ. ನಾನು ಇಂತಹ ಬಹಳಷ್ಟು ಧ್ಯಾನದ ತಂತ್ರಗಳನ್ನು ಅಭ್ಯಾಸ ಮಾಡಿದ್ದೇನೆ. ಆದರೆ, ಕೆಲವು ವಾರಗಳ ನಂತರ ಇವೆಲ್ಲವೂ ಯಾಂತ್ರಿಕವಾದ ಮಾಮೂಲು ತಂತ್ರಗಳಂತಾಗುತ್ತವೆ ಹಾಗೂ ಇವುಗಳ ಪ್ರಭಾವ ಕಡಿಮೆಯಾಗುತ್ತದೆ" ಎಂದು ಲೈಟ್ ಚಾನೆಲಿಂಗ್ ಸೆಷನ್‌ವೊಂದರಲ್ಲಿ ಒಬ್ಬರು ಹೇಳಿದರು.

ಆ ವ್ಯಕ್ತಿಯು ಹೇಳಿದಂತೆ ಇದು ನಮ್ಮಲ್ಲನೇಕರ ಸಾಮಾನ್ಯ ಅನುಭವವಾಗಿದೆ; ಈ ತಂತ್ರಗಳ ಅಭ್ಯಾಸ ಕೆಲವೊಮ್ಮೆ ಮಾಮೂಲಿ ಕೆಲಸ ಮತ್ತು ಯಾಂತ್ರಿಕವಾಗಿಬಿಡುತ್ತದೆ. ನೀರಸ ಎಂದೆನಿಸಲೂ ಬಹುದು. ಆದರೆ, ಲೈಟ್ ಚಾನೆಲಿಂಗ್ ಅಥವಾ ಇತರ ಇಂತಹ ತಂತ್ರಗಳು ತಮ್ಮ ಪರಿಣಾಮಕಾರಿತ್ವವನ್ನು ಕಳೆದುಕೊಳ್ಳುತ್ತವೆಯೆ? ಇವುಗಳು ನಮಗೆ ಸಹಾಯ ಮಾಡುವುದನ್ನು ನಿಲ್ಲಿಸುತ್ತವೆಯೆ? ಮೊದಲಿನ ಪ್ರಭಾವವನ್ನು ಪಡೆದುಕೊಳ್ಳುವುದು ಹೇಗೆ?

ಒಬ್ಬ ಶಾಲಾ ವಿದ್ಯಾರ್ಥಿಯು ಒಂದು ಪಠ್ಯವಿಷಯವನ್ನು ಓದಲು ಆಸಕ್ತಿ ಇಲ್ಲದೆ, ಅದು ಕಡ್ಡಾಯವಾದ್ದರಿಂದ, ಯಾಂತ್ರಿಕವಾಗಿ ಬಾಯಿಪಾಠ ಮಾಡಿದರೆ, ಅದು ಕೇವಲ ಬೇಸರವನ್ನೇ ತರುವುದು. ಅಂತಹ ಪ್ರಯತ್ನವು ಆಯಾಸಗೊಳಿಸುತ್ತದೆ ಮತ್ತು ಶ್ರಮದಾಯಕವೆನಿಸುತ್ತದೆ. ಆದರೆ, ಆ ಪಾಠದಲ್ಲಿರುವ ಜ್ಞಾನವು ಅದರ ಮೌಲ್ಯವನ್ನು ಕಳೆದುಕೊಳ್ಳುವುದೆ? ಇಲ್ಲ! ಆ ವಿದ್ಯಾರ್ಥಿಯ ಅಂತರ್ಗತ ಮಾಡಿಕೊಳ್ಳುವಿಕೆ ಸಾಲದು ಹಾಗೂ ಬಹುಶ: ಕಲಿಯುವ ವಿಧಾನವು ಸರಿಯಿಲ್ಲವೆಂದು ಹೇಳಬಹುದು. ಕಲಿಯುವ ವಿಧಾನವು ಆ ಪಠ್ಯವಿಷಯದಲ್ಲಿ ಆಸಕ್ತಿಯನ್ನು ಹುಟ್ಟಿಸುವಂತಿರಬೇಕು. ಇದನ್ನು ಅನೇಕ ರೀತಿಯಲ್ಲಿ ಮಾಡಬಹುದು.

ಇದೇ ರೀತಿ, ಲೈಟ್ ಚಾನಲಿಂಗ್ ಅಭ್ಯಾಸದಲ್ಲಿ ನಮ್ಮ ತೊಡಗುವಿಕೆಯನ್ನು ಸ್ವಲ್ಪ ಹೆಚ್ಚಿಸಿಕೊಳ್ಳಬಹುದು. ಪ್ರತಿ ದಿನದ ಅಭ್ಯಾಸದ ಜೊತೆಗೆ ಬೆಳಕಿನ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಪ್ರಯತ್ನಿಸಬಹುದು. ಬೆಳಕಿನ ಬಹು ಆಯಾಮಗಳನ್ನು, ಅದರ ಗುಣಪಡಿಸುವ ಕ್ಷಮತೆಯನ್ನು (healing capacities) ಹಾಗೂ ಮತ್ತಿತರ ವಿಷಯಗಳನ್ನು ಅರಿತುಕೊಳ್ಳಲು ಪ್ರಯತ್ನಿಸಬಹುದು. ಬೆಳಕಿನ ಮೂಲ ಮತ್ತು ಅದರಲ್ಲಿರುವ ಜೀವಶಕ್ತಿಯ ಬಗ್ಗೆ ಆಲೋಚಿಸಲು ಪ್ರಯತ್ನಿಸಬಹುದು. ಸಮಾನ ಅಭಿರುಚಿಯುಳ್ಳ ಸ್ನೇಹಿತರೊಂದಿಗೆ ನಮ್ಮ ಲೈಟ್ ಚಾನಲಿಂಗ್ ಅಭ್ಯಾಸದ ಬಗ್ಗೆ ಚರ್ಚಿಸಬಹುದು ಹಾಗೂ ಅವರ ಅನುಭವಗಳನ್ನು ಕೇಳಿ ತಿಳಿದುಕೊಳ್ಳಬಹುದು. ಬೆಳಕನ್ನು ಸುಲಭವಾಗಿ ಬಳಸಿಕೊಂಡು, ಹಲವು ಬಗೆಯ ಉಪಯೋಗಗಳನ್ನು ಪಡೆದಿರುವ ಶಾಲಾ ಮಕ್ಕಳೊಂದಿಗೆ ಮಾತನಾಡಬಹುದು.

'ನೀವು ಮಾಡುವ ಎಲ್ಲಾ ಚಟುವಟಿಕೆಗಳಿಗೆ ಪ್ರೀತಿ ಸೇರಿಸಿ' ಎಂದು ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಪ್ರಾರಂಭಿಸಿದ ಮಾಸ್ಟರ್ ಪದೇ ಪದೇ ಹೇಳುತ್ತಿದ್ದರು. ನಾವು ಪ್ರೀತಿಯುತವಾಗಿ ಲೈಟ್ ಚಾನಲ್ ಮಾಡಬಹುದು. ದೇವರೇ ಆಗಿರುವ ಬೆಳಕಿನೊಂದಿಗೆ ಪ್ರೀತಿಯ ಸಂಬಂಧವನ್ನು ಬೆಳೆಸಿಕೊಳ್ಳಬಹುದು ಎಂದು ನಾನು ನಂಬುತ್ತೇನೆ.

ನಮ್ಮ ಯಾಂತ್ರಿಕ ಪ್ರಯತ್ನಗಳಿಗೆ ಪ್ರೀತಿಯನ್ನು ಸೇರಿಸಿದಾಗ ನಮ್ಮ ಅಭ್ಯಾಸವು ಉನ್ನತ ಮಟ್ಟಕ್ಕೇರುತ್ತದೆ. ಆಗ ನಾವು ಬೆಳಕಿನ ಶ್ರೇಷ್ಠವಾದ ಅಂಶಗಳನ್ನು ಅನುಭವಿಸಲು ಪ್ರಾರಂಭಿಸುತ್ತೇವೆ ಹಾಗೂ ಅನೇಕ ಪ್ರಯೋಜನಗಳನ್ನು ಕೊಡುಗೆಯಾಗಿ ಪಡೆಯುತ್ತೇವೆ. ಆಗ, ಅದರ ಪ್ರಭಾವವು ಶಾಶ್ವತವಾಗಿರುತ್ತದೆ!

ಜೀವರಾಶಿಯ ಹಿಂದೆ ಇರುವ ಬುದ್ಧಿಶಕ್ತಿಯೇ ಬೆಳಕು, ಅದು ಎಲ್ಲಾ ಜೀವರಾಶಿಯ ಮೂಲ. ಬೆಳಕಿನಲ್ಲಿ ಪ್ರೀತಿಯನ್ನಿಟ್ಟು ಲೈಟ್ ಚಾನಲ್ ಮಾಡಿದಾಗ ನಾವು ನಿಧಾನವಾಗಿ ಆದರೆ ಖಚಿತವಾಗಿ ಎಲ್ಲಾ ನಿರೀಕ್ಷೆಗಳನ್ನು ಮೀರಿಹೋಗುತ್ತೇವೆ. ನಾವು ಬೆಳಕನ್ನು ಹೊತ್ತು ಸಾಗಲು ಪ್ರಾರಂಭಿಸುತ್ತೇವೆ ಹಾಗೂ ಅದರ ಪ್ರಭಾವವು ಚಿರಂತನವಾಗುತ್ತದೆ.

ಅಂತಹ ಸಂಬಂಧದಿಂದ, ನಾವು ಪ್ರೀತಿಯ ಚಾನಲ್‌ಗಳಾಗುತ್ತೇವೆ. ಪ್ರೀತಿಯು ನಮ್ಮ ಪ್ರತಿಯೊಂದು ಕಣ ಕಣದಲ್ಲಿಯೂ ಹರಡಿ ನಮ್ಮ ನಿತ್ಯಜೀವನದ ಎಲ್ಲಾ ಅಂಶಗಳಿಗೂ ವ್ಯಾಪಿಸುತ್ತದೆ. ಎಲ್ಲಾ ಸಂಬಂಧಗಳನ್ನು ಸುಂದರಗೊಳಿಸುತ್ತದೆ. ನಮ್ಮಲ್ಲಿ ಅನೇಕರು ಪ್ರೀತಿಯನ್ನು ಆ ರೀತಿಯಲ್ಲಿ ಚಾನಲ್ ಮಾಡಿದಾಗ, ಸಮಾಜದಲ್ಲಿ, ನಮ್ಮ ರಾಷ್ಟ್ರದಲ್ಲಿ ಹಾಗೂ ಇಡೀ ವಿಶ್ವದಲ್ಲಿ ಪ್ರೀತಿಯ ಕಂಪನಗಳನ್ನು ಬಲಗೊಳಿಸುತ್ತೇವೆ.

ಪ್ರೀತಿಯಿಂದ ಅಭ್ಯಾಸ ಮಾಡಲು, ಬೆಳಕನ್ನು ಪ್ರೀತಿಸಲು ಹಾಗೂ ಕ್ರಮೇಣವಾಗಿ ಪ್ರೀತಿಯ ದಾರಿದೀಪಗಳಾಗಿ ಬೆಳೆಯಲು ನಾವು ಪ್ರಯತ್ನಿಸೋಣ. ■

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಯಾವುದಾದರೊಂದು ಲೈಟ್ ಚಾನಲಿಂಗ್ ಕೇಂದ್ರದಲ್ಲಿ ವಾರಕ್ಕೆ ಒಮ್ಮೆ ಲೈಟ್ ಚಾನಲ್ ಮಾಡಲು ದಯವಿಟ್ಟು ನಮ್ಮ ಜೊತೆಗೂಡಿ ಹಾಗೂ ಶಾಂತಿ ಮತ್ತು ಪ್ರೀತಿಯ ಕಂಪನಗಳನ್ನು ಹರಡಲು ಮತ್ತು ಬಲಗೊಳಿಸಲು ಸಹಾಯ ಮಾಡಿ. ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿ ಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿಕೊಳ್ಳ

### ಸೋಲಾಪೂರ್

**ಪ್ರತಿದಿನ (ಸಂಜೆ 7 - 7.30)**

ಬಾಲಗಣೇಶ್ ಮಂದಿರ, ಬುಶರ್ ಪೇಠ್,
ಮೊಹೋಲ್

☎ 09860967066 ಶ್ರೀ ವಿವೇಕಾನಂದ ಸ್ವಾಮಿ
☎ 09970800279 ಶ್ರೀಮತಿ ಸ್ವರೂಪ ಸ್ವಾಮಿ

### ಚೆನ್ನೈ

**ಭಾನುವಾರ (ಬೆಳಿಗ್ಗೆ 10 - 10.30)**

ನಂ. 481, ಸಾಯಿಪ್ರೇಮ್, 19ನೇ ರಸ್ತೆ,
4ನೇ ಸೆಕ್ಟರ್, ಕೆ. ಕೆ. ನಗರ

☎ 9444880409 ಶ್ರೀಮತಿ ರಾಜಲಕ್ಷ್ಮಿ ಆರ್

### ಪುಣೆ

**ಶನಿವಾರ (ಸಂಜೆ 4 - 4.30)**

3B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ

☎ 9011038169 ಶ್ರೀ ಆಶುತೋಶ್ ನವನ್‌ಗುಲ್

### ಮೀರಜ್

**ಗುರುವಾರ (ಸಂಜೆ 7.45)**

ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯ ಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವ ಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.



## ಅನುಭವಗಳು

ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ

ನಾನು ನಿವೃತ್ತಳಾಗಿದ್ದೇನೆ. ನನ್ನ ಸಂಬಳದ ಎರಡು ಇನ್‌ಕ್ರಿಮೆಂಟ್‌ಗಳು ಬಾಕಿ ಬರಬೇಕಾಗಿತ್ತು. ಹತ್ತು ತಿಂಗಳ ಹಿಂದೆಯೇ ನನ್ನ ಸರ್ವೀಸ್ ರೆಕಾರ್ಡ್, ಕಚೇರಿಗೆ ಹೋಗಿತ್ತು. ಆದರೆ, ವರ್ಗಾವಣೆ ಮತ್ತು ಇನ್ನಿತರ ಅನಾನುಕೂಲಗಳಿಂದ ಅಲ್ಲಿ ನನ್ನ ಸರ್ವೀಸ್ ರೆಕಾರ್ಡ್ ಕಾಣಲಿಲ್ಲ. ನನಗೆ ಏನು ಮಾಡಬೇಕೋ ಗೊತ್ತಾಗಲಿಲ್ಲ. ಆದಕಾರಣ, ನಾನು ನಿಯತವಾಗಿ ಮಾಡುತ್ತಿರುವ ಲೈಟ್ ಚಾನಲಿಂಗ್ ಜೊತೆಗೆ, ನನ್ನ ಕೇಸನ್ನು (case) ನೋಡಿಕೊಳ್ಳುವ ಸಿಬ್ಬಂದಿಗೂ ಬೆಳಕನ್ನು ಕಳುಹಿಸಿದೆ. ಪವಾಡದಂತೆ, ಒಂದು ದಿನ ನನ್ನ ಸರ್ವೀಸ್ ರೆಕಾರ್ಡ್ ಸಿಕ್ಕಿರುವ ವಿಷಯ ತಿಳಿಯಿತು ಹಾಗೂ ಪ್ರಕ್ರಿಯೆ ಪ್ರಾರಂಭವಾಯಿತು. ಕಳೆದ ನಾಲ್ಕು ತಿಂಗಳುಗಳಿಂದ ಅವರಿಗೆ ಬೆಳಕನ್ನು ಕಳುಹಿಸುತ್ತಿದ್ದೇನೆ. ಈಗ, ಆ ಪ್ರಕ್ರಿಯೆಯು ನನ್ನ ಬಿಲ್ ಪಾವತಿ ಮಾಡುವ ಕೊನೆಯ ಹಂತಕ್ಕೆ ಬಂದಿದೆ. ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿ ಕೊಳ್ಳಲು ಈ ಪವಿತ್ರವಾದ ಹಾಗೂ ಶಕ್ತಿಯುತವಾದ ಮಾರ್ಗವನ್ನು ನಮಗೆ ನೀಡಿದ ಋಷಿಗಳಿಗೆ ಮತ್ತು ಗುರೂಜಿಯವರಿಗೆ ನಾನು ಕೃತಜ್ಞಳಾಗಿದ್ದೇನೆ. ಬೆಳಕಿನ ಸಹಾಯದಿಂದ ಹೆಚ್ಚೆಚ್ಚು ಪ್ರಯೋಜನಗಳನ್ನು ಪಡೆಯುತ್ತಾ ಶಾಂತಿಯುತ ಜೀವನವನ್ನು ನಡೆಸೋಣ.

–ಸ್ವರ್ಣಲತಾ, ಕಾರ್ಯಕರ್ತೆ

ಕೂಕ್ ಟೌನ್ ಬಡಾವಣೆಯ ಸಿದ್ಧಿ ವಿನಾಯಕ ದೇವಸ್ಥಾನದಲ್ಲಿರುವ ಲೈಟ್ ಚಾನಲಿಂಗ್ ಕೇಂದ್ರದಿಂದ ನಾನು ಈ ತಂತ್ರವನ್ನು ಕಲಿತುಕೊಂಡಿದ್ದೇನೆ ಹಾಗೂ ಪ್ರತಿ ದಿನ ಇದನ್ನು ಅಬ್ಯಾಸ ಮಾಡುತ್ತಿದ್ದೇನೆ. ನಿಯತವಾಗಿ ಅಭ್ಯಾಸ ಮಾಡುತ್ತಿರುವುದರಿಂದ, ನನ್ನ ನಕಾರಾತ್ಮಕ ಗುಣಗಳೆಲ್ಲವೂ ಹೊರಟು ಹೋಗಿವೆ ಮತ್ತು ನಾನು ಯಾವಾಗಲೂ ಸಮಾಧಾನದಿಂದ ಇರುತ್ತೇನೆ; ಉದ್ವಿಗ್ನ ಪರಿಸ್ಥಿತಿಗಳಲ್ಲೂ ಕೂಡ ಸಮಾಧಾನದಿಂದಿರುತ್ತೇನೆ. ಇದು ದಿನ ನಿತ್ಯದ ಆಗುಹೋಗುಗಳನ್ನು ಬಹಳ ಸುಲಭವಾಗಿ ಎದುರಿಸಲು ಸಹಾಯ ಮಾಡಿದೆ. ಕೆಲವು ಸಲ ನಾನು ಅಗಾಧವಾದ ಬೆಳಕಿನ ಮಧ್ಯದಲ್ಲಿರುವಂತೆ ಅನಿಸುತ್ತದೆ. ಇದು ಬಹಳ ಶಾಂತಿಯುತವಾಗಿದೆ.

ನಮ್ಮ ದೇವಸ್ಥಾನದಲ್ಲಿ ಶೂನ್ಯ ಮಾಸದ ಭಜನೆ ಪ್ರತಿ ದಿನ ಬೆಳಿಗ್ಗೆ 10 ಘಂಟೆಗೆ ಪ್ರಾರಂಭವಾಗುತ್ತದೆ. ಪ್ರತಿ ಶುಕ್ರವಾರ ಭಜನೆಯ ನಂತರ ಲೈಟ್ ಚಾನಲಿಂಗ್ ಮಾಡುತ್ತೇವೆ. ಈ ತಿಂಗಳು ಪೂರ್ತಿ ಭಜನಾ ತಂಡಕ್ಕೆ ಬಿಸ್ಕತ್ ಮತ್ತು ಚಹವನ್ನು ನಾನು ನೀಡುತ್ತೇನೆ. ಡಿಸೆಂಬರ್ 30, 2016ರ ಶುಕ್ರವಾರದಂದು ಚೆಕ್‌ಅನ್ನು ನಗದು ಗೊಳಿಸಲೆಂದು ಅಂಚೆ ಕಛೇರಿಗೆ ಹೋಗಿದ್ದೆ. ಅಲ್ಲಿ ತುಂಬಾ ಜನರಿದ್ದರಿಂದ ನಾನು ಕಾಯಬೇಕಾಯಿತು. ಸಮಯ ಕಳೆಯುತ್ತಿದ್ದಂತೆ ನನ್ನ ಹೊರತು ಪ್ರತಿಯೊಬ್ಬರೂ ಚಡಪಡಿಸುತ್ತಿದ್ದರು. ದೇವಸ್ಥಾನಕ್ಕೆ ಹೋಗುವುದಕ್ಕೆ ಮುಂಚೆ ನನಗೆ ಸಾಕಷ್ಟು ಸಮಯ ಸಿಗುತ್ತದೆಯೇ ಎಂದು ಯೋಚಿಸುತ್ತಿದ್ದರೂ ಸಹ ನಾನು ಸಮಾಧಾನದಿಂದ ಇದ್ದೆ ಮತ್ತು ಲೈಟ್ ಚಾನಲ್ ಮಾಡತೊಡಗಿದೆ. ಇದ್ದಕ್ಕಿದ್ದಂತೆ ನನ್ನ ಹೆಸರನ್ನು ಕರೆಯಲಾಯಿತು. ಲೈಟ್ ಚಾನಲಿಂಗ್ ಪ್ರಭಾವದಿಂದ ಪ್ರತಿಯೊಂದೂ ಚುರುಕಾಗಿ ಹಾಗೂ ಸರಾಗವಾಗಿ ನಡೆಯಿತೆಂದು ನನ್ನ ನಂಬಿಕೆ. ಚಹ ತಯಾರಿಸಿ ದೇವಸ್ಥಾನಕ್ಕೆ ತೆಗೆದುಕೊಂಡು ಹೋಗಲು ಬೇಕಿರುವಷ್ಟು ಸಮಯ ಇರುವಾಗಲೇ ಮನೆಯನ್ನು ತಲುಪಿದೆ!

ನವೆಂಬರ್ 26ರಂದು ನಾನು ಮತ್ತು ನನ್ನ ಮಗಳು ಒಂದು ಕಾರ್ಯಕ್ರಮಕ್ಕೆ ಹೋಗಲು ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದೆವು. ದಾರಿಯಲ್ಲಿ ಮೆರವಣಿಗೆ ಸಾಗುತ್ತಿದ್ದುದರಿಂದ ಸಂಚಾರ ತಡೆಹಿಡಿಯಲಾಗಿತ್ತು. ಆ ಕಾರ್ಯಕ್ರಮ ನಮಗೆ ತಪ್ಪಿಹೋಗಬಹುದೇನೋ ಎನ್ನುವಂತೆ ತೋರುತ್ತಿತ್ತು. ಬಸ್ಸಿನಲ್ಲಿದ್ದ ಪ್ರತಿಯೊಬ್ಬರೂ ಕಿರಿ ಕಿರಿ ಗೊಂಡಿದ್ದರು. ನಾನು ಸಮಾಧಾನದಿಂದ ಲೈಟ್ ಚಾನಲ್ ಮಾಡಲು ಪ್ರಾರಂಭಿಸಿದೆ. ಕ್ರಮೇಣವಾಗಿ ಸಂಚಾರ ಸಹಜ ಸ್ಥಿತಿಗೆ ಮರಳಿತು ಹಾಗೂ ಆ ಕಾರ್ಯಕ್ರಮದ ಸ್ಥಳಕ್ಕೆ ತಲುಪುವುದಕ್ಕೆ ತಡವಾಗಲಿಲ್ಲ!

ಕೋಪ ಮಾಡಿಕೊಳ್ಳದೇ, ಆತಂಕಕ್ಕೆ ಒಳಗಾಗದೇ ಲೈಟ್ ಚಾನಲಿಂಗ್ ಅಭ್ಯಾಸದಿಂದ ನಮ್ಮ ಎಲ್ಲ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ನಾನು ದೃಢವಾಗಿ ನಂಬುತ್ತೇನೆ.

–ವಿಜಯ ಲಕ್ಷ್ಮಿ ವಿ, ಲೈಟ್ ಚಾನಲಿಂಗ್ ಸೆಂಟರ್, ಕೂಕ್ ಟೌನ್, ಬೆಂಗಳೂರು

ಲೈಟ್ ಚಾನಲಿಂಗ್ ಸೆಷನ್ ನಂತರ ನಾವು ತರಗತಿಗಳಿಗೆ ಹೋದೆವು. ನಾಲ್ಕನೆಯ ತರಗತಿಯ ನನ್ನ ವಿದ್ಯಾರ್ಥಿಗಳು ಆಟವಾಡಲು ಐದು ನಿಮಿಷಗಳ ಕಾಲಾವಕಾಶ ಕೊಡಬೇಕೆಂದು ಕೇಳಿಕೊಂಡರು. ಇದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಅವರು ಹಿಂದೆಂದೂ ಈ ರೀತಿ ಕೇಳಿರಲಿಲ್ಲ. ಹೀಗಾಗಿ ನಾನು ಇದಕ್ಕೆ ಕಾರಣವೇನೆಂದು ಕೇಳಿದೆ. ನಾವು ಶಕ್ತಿಪಡೆದು ತುಂಬಾ ಉತ್ಸಾಹಿಗಳಾಗಿದ್ದೇವೆ (energetic), ಈ ಕಾರಣದಿಂದ ಆಟವಾಡಲು ಇಷ್ಟಪಡುತ್ತೇವೆ ಎಂದು ಹೇಳಿದರು. ನಾನು ಅವರಿಗೆ ಅನುಮತಿ ನೀಡಿದೆ. ಅವರು ಕೇವಲ ಐದು ನಿಮಿಷಗಳ ಕಾಲ ಮಾತ್ರ ಆಟವಾಡಿದರು. ಸಾಮಾನ್ಯವಾಗಿ ಅರ್ಧ ಘಂಟೆಯವರೆಗೆ ಎಷ್ಟು ಆಟವಾಡಬಹುದೋ ಅಷ್ಟು ಆಟವನ್ನು ಅವರು ಕೇವಲ ಐದು ನಿಮಿಷಗಳಲ್ಲಿ ಆಡಿದರು. ಹಿಂದೆಂದೂ ಅವರು ಇಷ್ಟೊಂದು ಉತ್ಸಾಹಿಗಳಾಗಿರುವುದನ್ನು ನಾನು ನೋಡಿರಲಿಲ್ಲ! ಸಾಮಾನ್ಯವಾಗಿ ಕುಂಟು ನೆಪಗಳನ್ನು ಹೇಳಿ ಆಟಗಳಲ್ಲಿ ಭಾಗವಹಿಸದೇ ತಪ್ಪಿಸಿಕೊಳ್ಳುತ್ತಿದ್ದ ಅಷ್ಟೇನು ಚುರುಕಿಯಿಲ್ಲದ ಹುಡುಗರೂ ಸಹ ಯಾವ ಬಲವಂತವಿಲ್ಲದೆ ತುಂಬಾ ಸಂತೋಷದಿಂದ ಆಟವಾಡಿದರು. ಇದನ್ನು ಕಂಡು ನನಗೆ ಆಶ್ಚರ್ಯವಾಯಿತು. ಇದಾದ ನಂತರ, ಕೇವಲ ಒಂದು ದಿನದ ಲೈಟ್ ಚಾನಲಿಂಗ್ ಅಭ್ಯಾಸವು ನಮ್ಮನ್ನು ಇಷ್ಟೊಂದು ಉತ್ಸಾಹಿಗಳನ್ನಾಗಿ ಮಾಡಿದೆ, ಒಂದು ವೇಳೆ ಪ್ರತಿ ದಿನ ಲೈಟ್ ಚಾನಲ್ ಮಾಡಿದರೆ ಏನಾಗಬಹುದು? ಎಂದು ಅವರು ಕೇಳಿದರು.

–ಕಲ್ಯಾಣ ಸುಂದರಿ ಜಿ, ಉಪಾಧ್ಯಾಯಿನಿ, ಪಿ ಎಸ್ ಎಮ್ ಮಿಡ್ಲ್‌ಸ್ಕೂಲ್, ಕುಲಸೇಕರನ್ ಪಟ್ಟಿನಮ್

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಲೋಟಸ್ ಪ್ರಿಂಟರ್ಸ್ ಪ್ರೈ. ಲಿ., ಫೋನ್: 23380167 / 23209909, ಇಮೇಲ್: lotus.creation777@gmail.com, ವೆಬ್‌ಸೈಟ್: www.lotusprinters.com
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ